8. ವರದಿಯನ್ನೊಪ್ಪಿಸುವುದು

ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲಲ್ಯಾಣ ಸಮಿತಿ) : ಮಾನ್ಯ ಅಧ್ಯಕ್ಷರೆ, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿಯ ಹತ್ತೊಂಬತ್ತನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಒಪ್ಪಿಸಲಾಯಿತು.

9. ವಿಷಯ : ಪ್ರಶ್ನೋತ್ತರ ವೇಳೆ ಬಗ್ಗೆ

ಅಧ್ಯಕ್ಷರು : ಇವೊತ್ತು ಪ್ರಶ್ನೋತ್ತರ ಅವಧಿಗೆ ಸುಮಾರು ಒಂದು ಗಂಟೆ ಐವತ್ತು ನಿಮಿಷಗಳಷ್ಟು ಕಾಲಾವಕಾಶ ತೆಗೆದುಕೊಂಡಿರುವುದರಿಂದ ನಾನು ಎಲ್ಲಾ ಸದಸ್ಯರುಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಾಳೆಯಿಂದ ಸದಸ್ಯರುಗಳು ಪೂರಕ ಪ್ರಶ್ನೆಗಳನ್ನು ಕೇಳುವುದರ ಬಗ್ಗೆ ಎರಡು ಸಲ ಆಲೋಚಿಸಬೇಕಾಗಿತ್ತದೆ. ಇನ್ನುಮುಂದೆ ನಾನು ಪ್ರಶ್ನೋತ್ತರ ಅವಧಿಯನ್ನು ಒಂದು ಗಂಟೆ ಕಾಲಕ್ಕೆ ಸರಿಯಾಗಿ ಮುಗಿಸುತ್ತೇನೆ. ಒಂದು ವೇಳೆ ಒಂದು ಗಂಟೆಯೊಳಗೆ ಯಾವುದಾದರೂ ಪ್ರಶ್ನೆಗಳು ಮುಗಿಯದೆ ಬಾಕಿ ಇದ್ದಲ್ಲಿ ಅಂತಹ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ, ಆಗ ನಾನು ಅಸಹಾಯಕನಾಗುತ್ತೇನೆ. ಈ ವಿಷಯವನ್ನು ಮನಸ್ಸಿನಲ್ಲಿಟ್ಟು ಕೊಂಡು ಎಲ್ಲಾ ಸದಸ್ಯರೂ ನನ್ನ ಜೊತೆ ಸಹಕರಿಸಬೇಕು. ಯಾವುದೇ ಕಾರಣಕ್ಕೂ ನಾಳೆಯಿಂದ ಪ್ರಶ್ನೋತ್ತರ ಅವಧಿಯನ್ನು ಒಂದು ಗಂಟೆ ನಂತರ ವಿಸ್ತರಿಸುವುದಕ್ಕೆ ನಾನು ಸಿದ್ಧನಾಗಿರುವುದಿಲ್ಲ. ಆದುದರಿಂದ ಇದಕ್ಕೆ ಎಲ್ಲರೂ ಸಹಕರಿಸಬೇಕೆಂದು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇನೆ.

10. ನಿಲುವಳಿ ಸೂಚನೆ

ವಿಷಯ : ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ದಿನಾಂಕ 1-7-1997 ರಿಂದ ಜಾರಿಗೆ ಬರುವಂತೆ ವಿದ್ಯುತ್ ದರವನ್ನು ಶೇಕಡಾ 250ರಿಂದ 250 ರವರೆಗೆ ಹೆಚ್ಚಳ ಮಾಡಿರುವುದರಿಂದ ವಿದ್ಯುತ್ ಗ್ರಾಹಕರಿಗಾಗಿರುವ ತೊಂದರೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಮೊಟ್ಟ ಮೊದಲನೆಯದಾಗಿ ನಾನು ವಿರೋಧ ಪಕ್ಷದ ವತಿಯಿಂದ ತಮಗೆ ಅಭಿನಂದಿಸುತ್ತೇನೆ. ವಿದ್ಯುತ್ ದರ ಹೆಚ್ಚಳದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಬೇಕೆಂದು ಎಲ್ಲಾ ವಿರೋಧ ಪಕ್ಷಗಳು ಒಂದೊಂದು ರೂಪದಲ್ಲಿ ನಿಲುವಳಿ ಸೂಚನೆಗಳನ್ನು ಕಳುಹಿಸಿಕೊಟ್ಟಿದ್ದು, ಈ ಸಂಬಂಧ ನಿಲುವಳಿ ಸೂಚನೆ ಮೂಲಕ ವಿಷಯ ಪ್ರಸ್ತಾಪಿಸಲು